## ಎಕ್ಸ್ಎನ್‌ಸ್ಪೈ

ಆ್ಯಂಡ್ರಾಯ್ಡ್‌ನ ಈ ಆ್ಯಪ್‌ನಿಂದ ನಿಮ್ಮ ಮಕ್ಕಳು ಆ್ಯಂಡ್ರಾಯ್ಡ್ ಸಾಧನದಲ್ಲಿ ಕೈಗೊಳ್ಳುವ ಚಟುವಟಿಕೆಗಳನ್ನು ಗಮನಿಸಲು ಸಾಧ್ಯ. ಆದರೆ ಅವುಗಳನ್ನು ನಿಯಂತ್ರಿಸುವ ಯಾವುದೇ ಯತ್ನವನ್ನು ಈ ಆ್ಯಪ್ ಮಾಡಲಾರದು. ಇದು ಐಕ್ಲೌಡ್ ಬ್ಯಾಕಪ್‌ನಿಂದ ಡೇಟಾವನ್ನು ಸಂಗ್ರಹಿಸುತ್ತದೆ. ಇದನ್ನು ಕೆಲವು ಕಂಪೆನಿಗಳಲ್ಲಿ ಉದ್ಯೋಗಿಗಳಿಗೆ ನೀಡಲಾದ ಕಂಪೆನಿ ಮೊಬೈಲ್‌ಗಳ ಬಳಕೆ ಮೇಲೆ ನಿಗಾ ಇಡಲು ಕೂಡಾ ಬಳಸಲಾಗುವುದು. ಈ ಆ್ಯಪ್‌ಗೆ ನಿಗದಿತ ಶುಲ್ಕ ಸಲ್ಲಿಸಬೇಕು.






## ಐಬುಕ್‌ನಿಂದ ಆಡಿಯೋಬುಕ್‌ಗೆ..

ಪುಸ್ತಕಗಳಲ್ಲಿನ ವಿಷಯವನ್ನು ಕೇಳಿಸಿಕೊಳ್ಳಲು ಆಡಿಯೋ ಆವೃತ್ತಿಯನ್ನು ಐಫೋನ್‌ಗೆ ಸೇರಿಸುವ ಅವಶ್ಯಕತೆ ಇಲ್ಲ. ಕೆಲವು ಅಗತ್ಯ ಸೆಟಿಂಗ್ ಮೂಲಕ ಪುಸ್ತಕದ ಟೆಕ್ಸ್ಟ್ ಕೂಡಾ ಆಡಿಯೋ ಆಗಿ ಬದಲಾಯಿಸಬಹುದು. ಇದನ್ನು ಐಫೋನಿನಲ್ಲಿ ಸಫಾರಿ ಆ್ಯಪ್ ಮೂಲಕ ಮಾಡಿಕೊಳ್ಳಬಹುದು. ಆದರೆ ಇದು ಮನುಷ್ಯರು ಓದುವುದಕ್ಕಿಂತ ಭಿನ್ನವಾಗಿರುವುದರಿಂದ ಹಲವರು ಇಷ್ಟಪಡಲಾರರು. ಕೆಲವೊಮ್ಮೆ ದೀಪ ಆರಿಸಿ ಮಲಗಿದರೂ ಓದಬೇಕೆಂಬ ಬಯಕೆ ಇರುವವರು ಇದನ್ನು ಆರಾಮವಾಗಿ ಬಳಸಬಹುದು.

## ಝೋಹೊ ನೋಟ್‌ಬುಕ್

ಐಫೋನ್‌ನ ಈ ಆ್ಯಪ್ ಎವ್ವರ್‌ನೋಟ್‌ಗೆ ಒಳ್ಳೆ ಸ್ಪರ್ಧೆ ನೀಡಬಹುದು ಎನ್ನುತ್ತಾರೆ ಇದನ್ನು ರೂಪಿಸಿದವರು. ನೋಟ್ಸ್ ತೆಗೆದುಕೊಳ್ಳಲು ಈ ಉಚಿತ ಆ್ಯಪ್ ಉಪಯುಕ್ತವಾಗಿದ್ದು ಸದ್ಯ ಮೊಬೈಲ್ ಆವೃತ್ತಿ ಮಾತ್ರ ಲಭ್ಯ. ಇದರಲ್ಲಿ ಸಂಗ್ರಹ ಮಾಡಲು ಸಾಕಷ್ಟು ಸ್ಥಳಾವಕಾಶವಿದ್ದು, 50 ಎಂಬಿ ವರೆಗಿನ ಫೈಲ್‌ಗಳನ್ನು ಕೂಡಾ ಅಪ್‌ಲೋಡ್ ಮಾಡಬಹುದು. ಸರಳ ಮೇಲ್ಮೈ ಇದ್ದು, ಆಯ್ಕೆಗಳು ಬೆರಳೆಣಿಕೆಯಲ್ಲಿವೆ. ವಿವಿಧ ಮಾಧ್ಯಮಗಳಲ್ಲಿ ನೋಟ್ಸ್ ಸೃಷ್ಟಿಸಬಹುದು. ಹಾಗೆಯೇ ನೋಟ್‌ಬುಕ್ ಸೃಷ್ಟಿಸಿ ಈ ನೋಟ್ಸ್ ಸಂಗ್ರಹಿಸಬಹುದು. ಆಡಿಯೋ, ಟೆಕ್ಸ್ಟ್ ಅಥವಾ ಫೋಟೊ ಯಾವುದೇ ಇದ್ದರೂ ವಿವಿಧ ಸಂಗ್ರಹಗಳಲ್ಲಿ ಕಾಪಿಡಬಹುದು.




## ಅಡೋಬ್ ಲೈಟ್‌ರೂಂ ಮೊಬೈಲ್

ಐಫೋನ್‌ನ ಈ ಆ್ಯಪ್ ಮೊಬೈಲ್ ಬಳಕೆದಾರರಿಗೆ ಫೋಟೊ ಟೂಲ್‌ಗಳನ್ನು ಒದಗಿಸುವುದಲ್ಲದೇ ಡೆಸ್ಕ್‌ಟಾಪ್‌ನಿಂದ ಸಿಂಕ್ ಆದ ಚಿತ್ರಗಳನ್ನೂ ಎಡಿಟ್ ಮಾಡುವ ಸವಲತ್ತು ನೀಡಿದೆ. ಅಂದರೆ ಛಾಯಾಚಿತ್ರಗ್ರಾಹಕರು ಡೆಸ್ಕ್‌ಟಾಪ್ ಮುಂದೆ ಕುಳಿತು ಎಡಿಟ್ ಮಾಡುವ ಅಗತ್ಯವಿಲ್ಲ. ಪ್ರಯಾಣ ಮಾಡುವಾಗಲೂ ಮಾಡಬಹುದು. ಕ್ಯಾಮೆರಾದಲ್ಲಿ ತೆಗೆದ ಕಚ್ಚಾ ಫೋಟೋಗಳನ್ನು ಕೆಲವು ಸ್ಥಳೀಯ ಹೊಂದಾಣಿಕೆಗಳ ಮೂಲಕ ಹಾಗೂ ಲೆನ್ಸ್ ಪ್ರೊಫೈಲ್ ತಿದ್ದುಪಡಿ ಮೂಲಕ ಎಡಿಟ್ ಮಾಡಬಹುದು. ಐಒಎಸ್ 8.1 ಆವೃತ್ತಿಯಲ್ಲಿ ಐಟ್ಯೂನ್ಸ್ ಆ್ಯಪ್ ಸ್ಟೋರ್‌ನಿಂದ ಡೌನ್‌ಲೋಡ್ ಮಾಡಬಹುದು. ಬಲ ಮೂಲೆಯಲ್ಲಿರುವ ಪ್ಲಸ್ ಸಂಕೇತ ಬಳಸಿ ಹೊಸ ಸಂಗ್ರಹವನ್ನು ಸೃಷ್ಟಿಸಬಹುದು.




■ ಎಸ್. ತುಂಬೆ